ಅಸಲು ದಾವೆ ನಂ.86/2022

ಡಿ.ಡಬ್ಲೂಃ 1– Padmanabhaiah S/o Parameshachar

ದಿನಾಂಕಃ 21/07/2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ಎಸ್ ಎನ್ ಎಂ ವಕೀಲರಿಂದ**

1. ನಾನು ಬಿಎ ಪದವಿಧರನಾಗಿರುತ್ತೇನೆ. ಎರಡನೇ ಪ್ರತಿವಾದಿ ಹತ್ತನೇ ತರಗತಿಯವರೆಗೆ ಓದಿರುತ್ತಾರೆ. ಮೂರನೇ ಪ್ರತಿವಾದಿ ಬಿಎಸ್‌ಸಿ ನರ್ಸಿಂಗ್ ಓದಿರುತ್ತಾರೆ ಮತ್ತು ನಾಲ್ಕನೇ ಪ್ರತಿವಾದಿ ಎಂಎ ಬಿಎಡ್ ಓದಿರುತ್ತಾರೆ. ನಮ್ಮ ತಂದೆ ಪರಮೇಶ್ವರಾಚಾರ್ ರವರಿಗೆ ಒಟ್ಟು 6 ಗಂಡು ಮಕ್ಕಳು 1 ಹೆಣ್ಣು ಮಗಳು. ನಾನು ಮತ್ತು ನನ್ನ ಅಣ್ಣ ತಮ್ಮಂದಿರುಗಳು 1983–84 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ವಿಭಾಗದಲ್ಲಿ ನನ್ನ ಹಿಸ್ಸೆಗೆ 2 ಎಕರೆ ಚಿಲ್ಲರೆ ಗುಂಟೆ ಜಮೀನು ಬಂದಿರುತ್ತದೆ. ನಾನು ವಾದಿಗೆ ಮತ್ತು ಬೇರೆ ಇನ್ನಿಬ್ಬರಿಗೆ ದಾವಾ ಸರ್ವೆ ನಂಬರ 72/1 ಜಮೀನಿನಲ್ಲಿ ಕೆಲವು ಭಾಗವನ್ನು ಮೊದಲು ಮಾರಾಟ ಮಾಡಿರುತ್ತೇನೆ. ಬುಕ್ಕಾಂಬುದಿ ಗ್ರಾಮದ ಸರ್ವೆ ನಂಬರ 448 ಮತ್ತು 449 ಗಳನ್ನು ನಾನು ಅನ್ವರ್ ಸಾಹೇಬರವರಿಗೆ 2008 ರಲ್ಲಿ ಮಾರಾಟ ಮಾಡಿರುತ್ತೇನೆ ಎಂದರೆ ನಮ್ಮ ಅಕ್ಕ ಪದ್ಮಾವತಿರವರು ಮಾರಾಟ ಮಾಡಿರುತ್ತಾರೆ ಮತ್ತು ನಾನು ಕೇವಲ ಸಾಕ್ಷಿದಾರನಾಗಿ ಸಹಿ ಹಾಕಿರುತ್ತೇನೆ.

2. ವಾದಿಯ ಬುಕ್ಕಾಂಬುದಿ ಗ್ರಾಮದಲ್ಲಿ ಗಾರೆ ಮತ್ತು ಕಾರ್ಪೆಂಟರ್ ಕೆಲಸದ ಮೇಸ್ತ್ರಿ ಆಗಿರುತ್ತಾರೆ ಎಂದರೆ ಮೇಸ್ತ್ರಿ ಆಗಿರುವುದಿಲ್ಲ ಮತ್ತು ಕೇವಲ ಗಾರೆ ಮತ್ತು ಕಾರ್ಪೆಂಟರ್ ಕೆಲಸ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಗೆ ಕನ್ನಡದಲ್ಲಿ "ಜಬಿ" ಎಂದು ಸಹಿ ಮಾಡುವುದಂತೆ ಹೊರತುಪಡಿಸಿ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ.8 ದಾಖಲೆಯಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸರಿಯಾಗಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ ಆದರೆ ಸಾಲದ ಭದ್ರತೆಗಾಗಿ ಅದನ್ನು ಬರೆದುಕೊಟ್ಟಿರುತ್ತೇವೆ. ಸದರಿ ನಾನು ಹೇಳುತ್ತಿರುವ ಭದ್ರತೆ ವಿಚಾರವನ್ನು ನಿಪಿ.8 ದಾಖಲೆಯಲ್ಲಿ ಎಲ್ಲಿಯೂ ಸಹ ಬರೆದಿರುವುದಿಲ್ಲ ಎಂದರೆ ಸರಿ. ಬುಕ್ಕಾಂಬುದಿ ಗ್ರಾಮದಲ್ಲಿ ವಾದಿಗೆ ಒಂದು ವಾಸದ ಮನೆಯನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ಅಥವಾ ಆಸ್ತಿ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಹುಟ್ಟಿದಾಗಿನಿಂದ ಬುಕ್ಕಾಂಬುದಿ ಗ್ರಾಮದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ಅದೇ ರೀತಿ ವಾದಿಯು ಹುಟ್ಟಿದಾಗಿನಿಂದ ಬುಕ್ಕಾಂಬುದಿ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಅಸಲು ದಾವೆ ನಂ.86/2022

ಡಿ.ಡಬ್ಲೂಃ 1–

3. ನಿಪಿ.8 ದಾಖಲೆಯನ್ನು ತರೀಕೆರೆ ನ್ಯಾಯಾಲಯದ ಎದುರಿಗೆ ಇರುವ ಪತ್ರ ಬರಹಗಾರರಾದ ರೇವಣ್ಣರವರ ಹತ್ತಿರ ತಯಾರಿಸಲಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ತಯಾರಿಸಲು ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ ಎಂದರೆ ನಾನು ಮತ್ತು ವಾದಿ ಸೇರಿ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಬುಕ್ಕಾಂಬುದಿ ಗ್ರಾಮದಲ್ಲಿ ನನಗೆ ರಾಜ್ಯ ಹೆದ್ದಾರಿಗೆ ಹೊಂದಿಕೊಂಡು ಸರ್ವೆ ನಂಬರ 72/15 ರಲ್ಲಿ 8 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆ ಸದರಿ ಜಮೀನಿನ ಪಹಣಿ ಆಗಿರುತ್ತದೆ ಎಂದರೆ ಸರಿ. ಅದನ್ನು **ನಿಪಿ.9** ಎಂದು ಗುರುತಿಸಲಾಯಿತು. ಅದೇ ರೀತಿ ಬುಕ್ಕಾಂಬುದಿ ಗ್ರಾಮದಲ್ಲಿ ನನಗೆ ರಾಜ್ಯ ಹೆದ್ದಾರಿಗೆ ಹೊಂದಿಕೊಂಡು ಸರ್ವೆ ನಂಬರ 72/10 ರಲ್ಲಿ 14 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆ ಸದರಿ ಜಮೀನಿನ ಪಹಣಿ ಆಗಿರುತ್ತದೆ ಎಂದರೆ ಸರಿ. ಅದನ್ನು **ನಿಪಿ.10** ಎಂದು ಗುರುತಿಸಲಾಯಿತು. ನಾನು ಲಕ್ಷ್ಮಿ ಕೋಂ ಶ್ರೀನಿವಾಸ ಎಂಬುವರಿಗೆ ಬುಕ್ಕಾಂಬುದಿ ಗ್ರಾಮದ ಸರ್ವೆ ನಂಬರ 72/1 ರಲ್ಲಿ 1 ಗುಂಟೆ ಜಮೀನು ಮತ್ತು ದೇವರಾಜ ಬಿನ್ ವಿಠಲ್‌ರಾವ್ ರವರಿಗೆ ಬುಕ್ಕಾಂಬುದಿ ಗ್ರಾಮದ ಸರ್ವೆ ನಂಬರ 72/6 ರಲ್ಲಿ 3 ಗುಂಟೆ ಜಮೀನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆಗಳು ಸದರಿ ಜಮೀನುಗಳ ಪಹಣಿಗಳು ಆಗಿರುತ್ತವೆ ಎಂದರೆ ಸರಿ. ಅವುಗಳನ್ನು ಕ್ರಮವಾಗಿ **ನಿಪಿ.11** ಮತ್ತು **12** ಎಂದು ಗುರುತಿಸಲಾಯಿತು.

4. ನಾವು ನಿಪಿ.8 ದಾಖಲೆಯನ್ನು ವಾದಿಯ ಹೆಸರಿಗೆ ನಿಜವಾಗಿಯೂ ಕ್ರಯಕ್ಕೆ ಕೊಡಲು ಒಪ್ಪಿ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.11 ಮತ್ತು 12 ದಾಖಲೆಗಳಲ್ಲಿರುವ ಜಮೀನುಗಳನ್ನು ನಾನು ಯಾವ ಉದ್ದೇಶಕ್ಕಾಗಿ ಮಾರಾಟ ಮಾಡಿರುತ್ತೇನೆ ಎಂದು ನನಗೆ ಈಗ ನೆನಪಿರುವುದಿಲ್ಲ. ನನಗೆ ನಾಲ್ಕನೇ ಪ್ರತಿವಾದಿಯ ಮದುವೆ ಮಾಡಲು ಹಣದ ಅವಶ್ಯಕತೆ ಇದುದ್ದರಿಂದ ನಾನೇ ವಾದಿಯ ಹತ್ತಿರ ಹೋಗಿ ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ ಆದರೆ ಸದರಿ ಅವಶ್ಯಕತೆಗಾಗಿ ನಾನು ಸಾಲ ಪಡೆದುಕೊಂಡು ಸದರಿ ದಾಖಲೆ ಬರೆದು ಕೊಟ್ಟಿರುತ್ತೇನೆ. ನಾನು ಸದರಿ ದಾಖಲೆಯನ್ನು ಸಾಲದ ಭದ್ರತೆಗಾಗಿ ಬರೆದುಕೊಟ್ಟಿಲ್ಲ ಹೊರತು ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ಮುಂಗಡ ಹಣವಾಗಿ ರೂ.3 ಲಕ್ಷಗಳನ್ನು ಪಡೆದು ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಕರಾರಿನ ಪ್ರಕಾರ ವಾದಿಯು ಕ್ರಯ ಪತ್ರ ಬರೆದುಕೊಡಿ ಎಂದು ಹಲವಾರು ಸಲ ಕೇಳಿಕೊಂಡರೂ ಸಹ ನಾನು ಬೇರೆ ಬೇರೆ ಕಾರಣಗಳಿಂದ ಮುಂದೂಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ಈ ನಿಟ್ಟಿನಲ್ಲಿ ವಾದಿ ನಮಗೆ ದಿನಾಂಕ 14–02–2022 ರಂದು ಒಂದು ನೋಟಿಸ್ ಸಹ ನೀಡಿರುತ್ತಾರೆ ಎಂದರೆ ಸರಿ ಆದರೆ ಅದು ಸುಳ್ಳಾಗಿರುತ್ತದೆ. ನಾವು ಸದರಿ ನೋಟಿಸಿಗೆ ಉತ್ತರ ನೀಡಿರುವುದಿಲ್ಲ ಎಂದರೆ ಸರಿ. ಈಗ ದಾವಾ ಸ್ವತ್ತಿನ ಬೆಲೆ ಹೆಚ್ಚಾಗಿರುವುದರಿಂದ ನಾನು ಅಕ್ರಮ ಲಾಭ ಮಾಡಿಕೊಳ್ಳಲು ನಾವು ಕೇವಲ ಸಾಲದ ಭದ್ರತೆಗಾಗಿ ದಾಖಲೆಯನ್ನು ಬರೆದುಕೊಟ್ಟಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಿ ಕ್ರಯ ಪತ್ರ ಬರೆದುಕೊಡಲು ನನಗೆ ಏನು ತೊಂದರೆ ಇರುತ್ತವೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಯಾವತ್ತೂ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿರುವುದಿಲ್ಲ ಮತ್ತು ಅದನ್ನು ಮಾರಾಟ ಮಾಡುವ ಅವಶ್ಯಕತೆಯೂ ಸಹ ನನಗೆ ಇರುವುದಿಲ್ಲ ಎಂದು ನುಡಿಯುತ್ತಾರೆ.

5. ವಾದಿಯು ಗ್ರಾಮದಲ್ಲಿ ಬಡ್ಡಿ ವ್ಯವಹಾರ ಮಾಡುತ್ತಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಮೂರು ಜನ ಮಕ್ಕಳು ಇದ್ದು ಮಕ್ಕಳಿಗಾಗಿ ಮನೆ ಕಟ್ಟಲು ದಾವಾ ಸ್ವತ್ತನ್ನು ಸದುದ್ದೇಶದಿಂದ ಖರೀದಿಸಲು ಒಪ್ಪಿದ್ದು ನಾವು ಸಹ ಸದುದ್ದೇಶದಿಂದ ಅದನ್ನು ಮಾರಾಟ ಮಾಡಲು ಒಪ್ಪಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಬುಕ್ಕಾಂಬುದಿ ಗ್ರಾಮದಲ್ಲಿ ಮನೆ ಇರುತ್ತದೆ ಎಂದರೆ ಸರಿ . ಅದೇ ರೀತಿ ನನಗೆ 20 ಗುಂಟೆ ಅಡಿಕೆ ತೋಟ ಸಹ ಇರುತ್ತದೆ ಎಂದರೆ ಸರಿ. ಮೂರನೇ ಪ್ರತಿವಾದಿಯು ಆರೋಗ್ಯ ಇಲಾಖೆಯಲ್ಲಿ ನೌಕರಿ ಮಾಡುತ್ತಿರುತ್ತಾರೆ ಎಂದರೆ ಗುತ್ತಿಗೆ ಆಧಾರದ ಮೇಲೆ ಮಾಡುತ್ತಿದ್ದಾನೆ ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆ:</u> ಇರುವುದಿಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/–

**(ಮುಜಫರ್)**

ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,

ತರೀಕೆರೆ .